


ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿಯಲ್ಲಿ ಚಿನ್ನದ ಅಂಬಾರಿಯನ್ನು ಹೊತ್ತ ಅರ್ಜುನ ಹೆಸರಿನ ಆನೆ ಚಿತ್ರ: ಬಿ.ಆರ್. ಸವಿತಾ

'ಪೋಜು ನೋಡಲು ಹೋಗುತ್ತಿದ್ದೇವೆ' ಎಂದು ಹೇಳುತ್ತಿದ್ದರು. ಈ 'ಪೋಜು' ಎಂಬ ಪದ ಉರ್ದು ಮೂಲದ 'ಫೌಜು'; ಅಂದರೆ ಸೈನ್ಯ. ಹೀಗಾಗಿ ಮೈಸೂರು ದಸರಾ ಎಂಬುದು ಸೈನ್ಯ ಮತ್ತು ಆಯುಧ ಸಂಬಂಧದ ಪೂಜೆಯಾಗಿ ಅದರೊಡನೆ ಚೌಡಿ, ಚಾಮುಂಡಿ, ಚಾಮುಂಡೇಶ್ವರಿ ಈ ಶಕ್ತಿ ದೇವತೆಯ ಆರಾಧನೆಯಾಗಿಯೂ ಪ್ರಚಲಿತವಿದೆ.

* * *

ವಿಜಯನಗರದ ಆಸ್ಥಾನ ಮತ್ತು ದಸರೆಯ ವೈಭವವನ್ನು ಪಾಶ್ಚಾತ್ಯ ಪ್ರವಾಸಿಗರು ವರ್ಣಿಸಿದ್ದರೆ, ಇತ್ತ 17ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಮೈಸೂರು ಅರಸರ ಆಸ್ಥಾನದಲ್ಲಿದ್ದ ಗೋವಿಂದ ವೈದ್ಯನೆಂಬ ಕವಿ 'ಕಂಠೀರವ ನರಸರಾಜ ವಿಜಯ' ಕೃತಿಯನ್ನು ಬರೆದಿದ್ದು, ಅದರಲ್ಲಿ ನವರಾತ್ರಿಯ ವಿವರಗಳು ಕಾಣಿಸುತ್ತವೆ. ಸಂಪೂರ್ಣವಾಗಿ ವಿಜಯನಗರದ ಅರಸರ ಮಹಾನವಮಿಯ ಉತ್ಸವದ ಪ್ರತಿಕೃತಿಯ ಸಂಗತಿಗಳಂತೆಯೇ ಇದು ಭಾಸವಾಗುತ್ತದೆ. ಮೈಸೂರಿನ ಸುತ್ತಮುತ್ತಲ ಪ್ರದೇಶಗಳಿಂದ ಅರಮನೆಗೆ ಬಂದಿದ್ದ ಅಲಂಕೃತ ವಾರ ನಾರಿಯರ ಕುತೂಹಲಕರ ನಾಮಧೇಯಗಳನ್ನೆಲ್ಲ ಗೋವಿಂದ ವೈದ್ಯ ಹೇಳುತ್ತಾನೆ. ಜೊತೆಗೆ ಜಟ್ಟಿಗಳು ವಜ್ರಮುಷ್ಠಿ ಕಾಳಗದಲ್ಲಿ ಹೊಡೆದಾಡಿ ರಕ್ತ ಸುರಿಸಿಕೊಳ್ಳುವ ವಿವರಗಳು ಇವೆ.

ಅರಮನೆ ಬಾಗಿಲ ಬಳಿಯಿಂದ ಪುರವೀಧಿ
ಹೊರವೊಳೆಯದ ಜಂಬೀಸಾರಿ
ಸುರುಚಿರ ಮಂಟಪ ಪರಿಯಂತಜನರು ಕಿ
ಕ್ಕಿರಿದೊಪ್ಪಿದರು ಸಂಭ್ರಮದೆ
ನಗುತಾಗ ಕಂಠೀರವೇಂದ್ರ ಸಿಂಗಾಡಿಯ
ತೆಗೆದಂಬುಗಳನಳವಡಿಸಿ
ಗಗನದೆ ಚರಿಪ ಪಕ್ಷಿಯನೆಚ್ಚು ಗುರಿಯ ಬ
ಲ್ಲೊಗಸ ಬೀರಿದ ನೋಳ್ಪರಿಗೆ

ಕಂಠೀರವ ನರಸರಾಜರು ಅಲಂಕೃತ ಕುದುರೆಯೇರಿದ್ದವರು ಅದನ್ನು ಬಿಟ್ಟು ಹಾಗೆಯೇ ಮೆರವಣಿಗೆಗೆ ಸಿದ್ಧವಾಗಿದ್ದ ಆನೆಯನ್ನೇರಿ ಬನ್ನಿ ವೃಕ್ಷದೆಡೆಗೆ ಮೆರವಣಿಗೆಯಲ್ಲಿ ಹೊರಟಿರಲು, ಅಸಂಖ್ಯಾತ ಜನಸಂದಣಿ ಮೆರೆದು ಅದನ್ನು ನೋಡುತ್ತಿತ್ತು. ರಾಜನು ಅಂಬಾರಿಯ ಮೇಲೆ